# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

***ವಾರ್ಡ್ ಸಂಖ್ಯೆ.27 ಬಾಣಸವಾಡಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 17-09-2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು***

**ಹಾಜರಿದ್ದ ಸದಸ್ಯರು,**

1. ಶ್ರೀ ವಿನೋದ್.ಕೆ.ಎಂ, ಅಧ್ಯಕ್ಷರು ಹಾಗೂ ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ ಶ್ರೀಕಾಂತ್.ಕೆ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ ಸಂದೀಪ್.ಎಸ್, ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ.27
4. ಶ್ರೀ ಶ್ರೀಧರ್, ಸ್ಥಳೀಯರು, ಬಾಣಸವಾಡಿ,
5. ದಿವ್ಯಾ ಪ್ರಸಾದ್, ಸ್ಥಳೀಯರು, ಬಾಣಸವಾಡಿ
6. ಶ್ರೀ ಮುರುಳಿ.ಬಿ, ಸ್ಥಳೀಯರು, ಬಾಣಸವಾಡಿ
7. ಶ್ರೀ ಜೆ.ಪ್ರಕಾಶ್, ಸ್ಥಳೀಯರು, ಬಾಣಸವಾಡಿ
8. ಶ್ರೀ ಬಾಬಿ ಕೆ ಜೋಸೆಫ್, ಸ್ಥಳೀಯರು, ಬಾಣಸವಾಡಿ
9. ಶ್ರೀ ಸಾಯಿಕುಮಾರ್.ಕೆ, ಸ್ಥಳೀಯರು, ಬಾಣಸವಾಡಿ
10. ಶ್ರೀ ಶಿವಶಂಕರ್ ಸ್ವಾಮಿ ಎಸ್ ಜಿ, ಸ್ಥಳೀಯರು, ಬಾಣಸವಾಡಿ
11. ಶ್ರೀ ಶ್ರೀಕಾಂತ್, ಸ್ಥಳೀಯರು, ಬಾಣಸವಾಡಿ
12. ಶ್ರೀ ಶ್ರೀರಾಮ, ಸ್ಥಳೀಯರು, ಬಾಣಸವಾಡಿ
13. ಶ್ರೀ ಅಮಿತ್ ನಿಗ್ಲಿ, ಸ್ಥಳೀಯರು, ಬಾಣಸವಾಡಿ
14. ಶ್ರೀ ಎಂ.ಮಣಿ, ಸ್ಥಳೀಯರು, ಬಾಣಸವಾಡಿ
15. ಶ್ರೀಮತಿ ಸುನೀತಾ, ಸ್ಥಳೀಯರು, ಬಾಣಸವಾಡಿ
16. ಶ್ರೀಮತಿ ಹಂಸವೇಣಿ.ಜಿ, ಸ್ಥಳೀಯರು, ಬಾಣಸವಾಡಿ
17. ಶ್ರೀ ನಾರಾಯಣ ರೆಡ್ಡಿ ಪಿ.ಬಿ ಸ್ಥಳೀಯರು, ಬಾಣಸವಾಡಿ
18. ಶ್ರೀ ಎಸ್ ಮಹದೇವನ್, ಸ್ಥಳೀಯರು, ಬಾಣಸವಾಡಿ
19. ಶ್ರೀ ಪಿ.ವಿ ರಾಮಚಂದ್ರನ್, ಸ್ಥಳೀಯರು, ಬಾಣಸವಾಡಿ
20. ಶ್ರೀ ಮಣಿ ಮೇಘಲೈ, ಸ್ಥಳೀಯರು, ಬಾಣಸವಾಡಿ
21. ಶ್ರೀ ಇಕ್ಬಾಲ್, ಸ್ಥಳೀಯರು, ಬಾಣಸವಾಡಿ
22. ಶ್ರೀ ಎಸ್.ಆರ್.ರಾಮಚಂದ್ರನ್, ಸ್ಥಳೀಯರು, ಬಾಣಸವಾಡಿ
23. ಶ್ರೀ ಜಯರಾಮನ್ ಗಣಪತಿ, ಸ್ಥಳೀಯರು, ಬಾಣಸವಾಡಿ
24. ಶ್ರೀ ಸುದರ್ಶನ್.ಜಿ, ಸ್ಥಳೀಯರು, ಬಾಣಸವಾಡಿ
25. ಶ್ರೀ ವಿದ್ಯಾಸಾಗರ್.ಜಿ, ಸ್ಥಳೀಯರು, ಬಾಣಸವಾಡಿ
26. ಶ್ರೀ ಕ್ರಿಸ್ಟೋಫರ್ ಕ್ರೂಜ್, ಸ್ಥಳೀಯರು, ಬಾಣಸವಾಡಿ

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ರೇಜಲ್ ಡ್ಯಾನಿಯಲ್, ವೈದ್ಯಾಧಿಕಾರಿಗಳು,
2. ಶ್ರೀ ಮಂಜುನಾಥ್, ಸಹಾಯಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ
3. ಶ್ರೀ ಆನಂದ್, ಕಿರಿಯ ಆರೋಗ್ಯ ನಿರೀಕ್ಷಕರು
4. ಶ್ರೀ ರಾಜೇಶ್, ಮಾರ್ಷಲ್, ಬಿಬಿಎಂಪಿ,
5. ಶ್ರೀ ಕೆ.ಶಿವಯ್ಯ, ಕೆಲಸ ಪರಿವೀಕ್ಷಕರು,

6. ಶ್ರೀ ಬಾಲಾಜಿ, ಸೂಪರ್‌ವೈಸರ್

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು, ಮಾಜಿ ಪಾಲಿಕೆ ಸದಸ್ಯರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ, ಸಭೆಯನ್ನು ಪ್ರಾರಂಭಿಸಲಾಯಿತು.

| ಕ್ರಸಂ | ಚರ್ಚಿಸಿದ ವಿಷಯಗಳು | ಸಂಬಂಧಪಟ್ಟ ಇಲಾಖೆ |
|---|---|---|
| 1 | ಈ ಹಿಂದಿನ ಸಭೆಯಲ್ಲಿ ಶ್ರೀ ಕ್ರಿಸ್ಟೋಫರ್ ರವರು ಮಾತನಾಡಿ ಹೆಚ್.ಆರ್.ಬಿ.ಆರ್ ಲೇಔಟ್, 1ನೇ ಬ್ಲಾಕ್, 9ನೇ ಮುಖ್ಯರಸ್ತೆಯ ಕಡೆಯಲ್ಲಿ ಸರ್ವೆ ನಂ.211 ರಲ್ಲಿರುವ ಸರ್ಕಾರದ ಕೆರೆಯ ಜಾಗದಲ್ಲಿ ಫೆನ್ಸಿಂಗ್ ಅಳವಡಿಸಲು ಸಭೆಯಲ್ಲಿ ಪ್ರಸ್ತಾಪಿಸಲಾಯಿತು. | ಮುಖ್ಯ ಅಭಿಯಂತರರು<br>**- Lakes Dept** |
| 2 | ಶ್ರೀ ಕ್ರಿಸ್ಟೋಫರ್ ರವರು ಮಾತನಾಡಿ ಸರ್ವಿಸ್ ರಸ್ತೆಯಲ್ಲಿ ಕ್ಲೌಡ್ ಕಿಚನ್ ರೆಸ್ಟೋರೆಂಟ್ ಮುಂಭಾಗದಲ್ಲಿ ಆನ್‌ಲೈನ್ ಡೆಲವರಿ ಬಾಯ್‌ಗಳು ರಸ್ತೆಯ ಇಕ್ಕೆಲಗಳಲ್ಲಿ ದ್ವಿಚಕ್ರವಾಹನಗಳನ್ನು ನಿಲುಗಡೆ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/SHI - SWM**<br>ಸದರಿ ವಿಷಯದ ಬಗ್ಗೆ ಹಿರಿಯ ಆರೋಗ್ಯ ನಿರೀಕ್ಷಕರು ಕ್ರಮವಹಿಸಲು ಸಭೆಯಲ್ಲಿ ಸೂಚಿಸಲಾಯಿತು. |
| 3 | ಶ್ರೀ ಕ್ರಿಸ್ಟೋಫರ್ ರವರು ಮಾತನಾಡಿ ಹೆಚ್.ಆರ್.ಬಿ.ಆರ್ ಲೇಔಟ್, ಸರ್ವಿಸ್ ರಸ್ತೆಯಲ್ಲಿ ಖಾಸಗಿ ಟ್ಯಾಂಕರ್‌ಗಳಿಂದ ಸೆಪ್ಟಿಕ್ ಟ್ಯಾಂಕರನ ಒಳಚರಂಡಿ ನೀರನ್ನು ಮಳೆ ನೀರು ಕಾಲುವೆಗೆ ಹರಿಬಿಡುತ್ತಿರುವ ಬಗ್ಗೆ ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BWSSB** |
| 4 | ಶ್ರೀ ಬಾಬಿ ಜೋಸೆಫ್ ರವರು ಮಾತನಾಡಿ, 4ನೇ ಎ ಮುಖ್ಯರಸ್ತೆ, ಓ.ಎಂ.ಬಿ.ಆರ್ ಲೇಔಟ್ ನಲ್ಲಿರುವ ಮನೆಯ ವಿದ್ಯುತ್ ಹೆಚ್ಚುವರಿಯಿಂದ ಮನೆಯ ವಿದ್ಯುತ್ ವ್ಯತ್ಯಯವಾಗಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ, ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BESCOM** |
| 5 | ಶ್ರೀ ಮುರುಳಿ ರವರು ಮಾತನಾಡಿ, 4ನೇ ಅಡ್ಡರಸ್ತೆ, ಓ.ಎಂ.ಬಿ.ಆರ್ ಲೇಔಟ್‌ನಲ್ಲಿ ಬಿಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ವತಿಯಿಂದ ರಸ್ತೆಯನ್ನು ಅಗೆದಿದ್ದು, ಅದನ್ನು ಪುನರ್ ನಿರ್ಮಾಣ ಮಾಡುವ ಕಾಮಗಾರಿಯನ್ನು ಮಾಡದೇ ಇರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ತುಂಬಾ ತೊಂದರೆಯಾಗುತ್ತಿದ್ದು, ಅದನ್ನು ಕೂಡಲೇ ಪುನರ್ ನಿರ್ಮಾಣ ಮಾಡಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |
| 6 | ವಾರ್ಡ್ ವ್ಯಾಪ್ತಿಯ ಜೈ ಜವಾನ್ ನಗರ, 4ನೇ ಅಡ್ಡರಸ್ತೆಯಲ್ಲಿ ಸಿಸಿ ಕ್ಯಾಮೆರಾವನ್ನು ಅಳವಡಿಸಿದ್ದು, ಕ್ಯಾಮೆರಾ ಸರಿಯಾಗಿ ನಿರ್ವಹಿಸದೇ ಇರುವುದರಿಂದ ಸದರಿ ಪ್ರದೇಶದಲ್ಲಿ ಪುಂಡ ಪೋಕಿರಿಗಳ ಹಾವಳಿ ಹೆಚ್ಚಾಗುತ್ತಿದ್ದು, ಸದರಿ ಪ್ರದೇಶದಲ್ಲಿರುವ ಸಿಸಿ | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP** |

| | | |
|---|---|---|
| | ಕ್ಯಾಮೆರಾಗಳನ್ನು ದುರಸ್ಥಿಪಡಿಸಲು ಸಭೆಗೆ ತಿಳಿಸಿದರು. | |
| 7 | ವಾರ್ಡ್ ವ್ಯಾಪ್ತಿಯ 3ನೇ ಅಡ್ಡರಸ್ತೆ, ಓ.ಎಂ.ಬಿ.ಆರ್ ಲೇಔಟ್ ನಲ್ಲಿ ರಸ್ತೆಗುಂಡಿಗಳು ಹೆಚ್ಚಾಗಿದ್ದು, ಇವುಗಳನ್ನು ಮುಚ್ಚದೇ ಇರುವುದರಿಂದ ವಾಹನ ಸವಾರರು ಬಿದ್ದು, ಸವಾರರಿಗೆ ತೊಂದರೆಯಾಗುವ ಸಾಧ್ಯತೆ ಇರುವುದರಿಂದ, ರಸ್ತೆಗುಂಡಿಗಳನ್ನು ಕೂಡಲೇ ಮುಚ್ಚಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP**<br>ಸದರಿ ರಸ್ತೆಯಲ್ಲಿ ನಗರೋತ್ಥಾನ ಅನುದಾನದ ಅಡಿಯಲ್ಲಿ ಹೊಸದಾಗಿ ರಸ್ತೆಯನ್ನು ನಿರ್ಮಾಣ ಮಾಡಲು ಅನುಮೋದನೆಯಾಗಿದ್ದು, ಅತೀ ಶೀಘ್ರವಾಗಿ ಕಾಮಗಾರಿ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು. |
| 8 | ವಾರ್ಡ್ ವ್ಯಾಪ್ತಿಯ 2ನೇ ಡಿ ಅಡ್ಡರಸ್ತೆಯಲ್ಲಿ ದ್ವಿಚಕ್ರ ವಾಹನಗಳನ್ನು ಅತೀ ವೇಗವಾಗಿ ಚಲಾಯಿಸುವುದು ಹಾಗೂ ವೀಲಿಂಗ್ ಮಾಡುತ್ತಿರುವುದರಿಂದ ಈ ರಸ್ತೆಯಲ್ಲಿ ಸಂಚರಿಸುವ ವಯೋವೃದ್ಧರು ಹಾಗೂ ನಾಗರೀಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- TEC** |
| 9 | ವಾರ್ಡ್ ವ್ಯಾಪ್ತಿಯ ಜೈ ಜವಾನ್‌ನಗರ, 6ನೇ ಅಡ್ಡರಸ್ತೆಯ ಮರಗಳ ಕೊಂಬೆ ರೆಂಬೆಗಳು ಮುರಿದು ಹೋಗಿದ್ದು, ಅವುಗಳನ್ನು ತೆರವುಗೊಳಿಸದೇ ಇರುವುದು ಕಂಡುಬಂದಿದ್ದು, ಕೂಡಲೇ ತೆರವುಗೊಳಿಸಲು ಸಭೆಗೆ ತಿಳಿಸಿದರು. | ವಾರ್ಡ್ ವ್ಯಾಪ್ತಿಯಲ್ಲಿರುವ ಹಳೆಯ ಮರದ ಕೊಂಬೆ ರೆಂಬೆಗಳನ್ನು ತೆರವುಗೊಳಿಸಲು ಕ್ರಮ ವಹಿಸುವುದು.<br>**(ವಲಯ ಅರಣ್ಯಾಧಿಕಾರಿಗಳು**<br>**(Forest Department)** |
| 10 | ವಾರ್ಡ್ ವ್ಯಾಪ್ತಿಯ 5ನೇ ಡಿ ಅಡ್ಡರಸ್ತೆ, ಹೆಚ್.ಆರ್.ಬಿ.ಆರ್ ಲೇಔಟ್, 5ನೇ ಅಡ್ಡರಸ್ತೆಯಲ್ಲಿರುವ ಪಾರ್ಕ್‌ನಲ್ಲಿ ಬೀದಿ ದೀಪಗಳು ಸರಿಯಾಗಿ ಉರಿಯದೇ ಇರುವುದರಿಂದ ಸಂಜೆ ಸಮಯದಲ್ಲಿ ವಾಯು ವಿಹಾರಿಗಳಿಗೆ ತೊಂದರೆಯಾಗುತ್ತಿರುವ ಬಗ್ಗೆ ಸಭೆಗೆ ತಿಳಿಸಿದರು. | **Horticulture Department** |
| 11 | ವಾರ್ಡ್ ವ್ಯಾಪ್ತಿಯ ಚಿಕ್ಕಬಾಣಸವಾಡಿ ಮುಖ್ಯರಸ್ತೆಯಲ್ಲಿ ಎಲ್ಲಂದರಲ್ಲಿ ತ್ಯಾಜ್ಯ ಹಾಗೂ ಇತರೆ ವಸ್ತುಗಳು ಬಿದ್ದಿದ್ದು, ಅವುಗಳನ್ನು ತೆರವುಗೊಳಿಸಲು ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಳ್ಳಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BBMP**<br>ಸದರಿ ರಸ್ತೆಯಲ್ಲಿ ಸಾಮೂಹಿಕ ಸ್ವಚ್ಛತಾ ಕಾರ್ಯಕ್ರಮವನ್ನು ವಿವಿಧ ಇಲಾಖೆಗಳ ಗಮನಕ್ಕೆ ತಂದು ದಿನಾಂಕವನ್ನು ನಿಗಧಿಪಡಿಸುವುದಾಗಿ ಸಭೆಗೆ ತಿಳಿಸಲಾಯಿತು. |
| 12 | ವಾರ್ಡ್ ವ್ಯಾಪ್ತಿಯ 2ನೇ ಡಿ ಅಡ್ಡರಸ್ತೆ, 2ನೇ ಬಿ ಮುಖ್ಯರಸ್ತೆ, 5ನೇ ಎ ಅಡ್ಡರಸ್ತೆ, 3ನೇ ಮುಖ್ಯರಸ್ತೆ, 6ನೇ ಬಿ ಅಡ್ಡರಸ್ತೆ, 6ನೇ ಎ ಕ್ರಾಸ್, 2ನೇ ಎ ಕ್ರಾಸ್, 2ನೇ ಬಿ ಕ್ರಾಸ್, ಓ.ಎಂ.ಬಿ.ಆರ್ ಲೇಔಟ್‌ನಲ್ಲಿ ನೀರು ಸರಬರಾಜು ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಗಮನಕ್ಕೆ ತಂದು ನೀರು | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BWSSB**<br>ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮಾತನಾಡಿ, ಈ ಬಗ್ಗೆ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು. |

| | | |
|---|---|---|
| | ಸರಬರಾಜು ಸಮರ್ಪಕವಾಗಿ ನಿರ್ವಹಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | |
| 13 | ವಾರ್ಡ್ ವ್ಯಾಪ್ತಿಯ 7ನೇ ಎ ಮುಖ್ಯರಸ್ತೆ, 7ನೇ ಬಿ ಮುಖ್ಯರಸ್ತೆ ಹಾಗೂ 7ನೇ ಸಿ ಮುಖ್ಯರಸ್ತೆ, ಹೆಚ್.ಆರ್.ಬಿ.ಆರ್ ಲೇಔಟ್‌ನಲ್ಲಿ ನೀರು ಸರಬರಾಜು ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಗಮನಕ್ಕೆ ತಂದು ನೀರು ಸರಬರಾಜು ಸಮರ್ಪಕವಾಗಿ ನಿರ್ವಹಿಸಲು ಕ್ರಮ ವಹಿಸಲು ಸಭೆಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಭಿಯಂತರರು<br>**AEE/AE- BWSSB**<br>ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮಾತನಾಡಿ, ಈ ಬಗ್ಗೆ ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು. |

ಕೊನೆಯದಾಗಿ ಮಾನ್ಯ ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು ಮಾತನಾಡಿ, ಇಂದಿನ ಮೂರು (03) ವಾರ್ಡ್ ಕಮಿಟಿ ಸಭೆಗಳಿಗೆ ಗೈರು ಹಾಜರಾಗಿರುವ ಬೃಹತ್ ನೀರುಗಾಲುವೆ, ಬೆಸ್ಕಾಂ, ತ್ಯಾಜ್ಯ ನೀರಿನ ನಿರ್ವಹಣೆ, ಸಂಚಾರಿ ಪೊಲೀಸ್, ಬಾಣಸವಾಡಿ ರವರುಗಳು ಕಡ್ಡಾಯವಾಗಿ ಮುಂದಿನ ಸಭೆಗೆ ಹಾಜರಿರಲು ಕ್ರಮ ವಹಿಸಲು ಸೂಚಿಸಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ವಿಷಯಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿ / ನೌಕರರುಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ತಿಳಿಸಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ.27, ಬಾಣಸವಾಡಿ

ಅಧ್ಯಕ್ಷರು
(ನೋಡೆಲ್ ಅಧಿಕಾರಿಗಳು)
ವಾರ್ಡ್ ಸಂಖ್ಯೆ.27, ಬಾಣಸವಾಡಿ

**ಪ್ರತಿಯನ್ನು**

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ.
5) ವಾರ್ಡ್ ಕಮಿಟಿಯ ಸದಸ್ಯರಿಗೆ/ಕಛೇರಿ ಕಡತಕ್ಕೆ.